ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೆ ; ಹಾಗಿದ್ದಲ್ಲಿ ಇಲ್ಲಿಯವರೆಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು, ಕ್ರಮ ಕೈಗೊಳ್ಳಲಾಗಿದೆ. ಟೈರ್ ಸಂಸ್ಕರಣಾ ಘಟಕಗಳನ್ನೊಳಗೊಂಡಂತೆ ವಿಭಾಗೀಯ ಕಾರ್ಯಾಗಾರ ಹಾಗೂ ವಿಭಾಗೀಯ ಕಛೇರಿಗಳ ನಿರ್ಮಾಣ ಕಾರ್ಯಗಳು ಅಂತಿಮ ಹಂತದಲ್ಲಿದ್ದು, ಆಗಸ್ಟ್ 2002ರ ಅಂತ್ಯದೊಳಗೆ ಕಾಮಗಾರಿಗಳು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಲೈಸೆನ್ಸ ನೀಡುವುದು

1643 (1879) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀರ್ ಬ್ರಾಂಡಿ ಶಾಪ್‌ಗಳಿಗೆ ಮತ್ತು ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಸಿಎಲ್-2 ಮತ್ತು ಸಿಎಲ್-9 ಲೈಸೆನ್ಸ್‌ಗಳನ್ನು ಪ್ರಸಕ್ತ ವರ್ಷ ನೀಡಲಾಗುವುದೇ ?

ಆ) ಹಾಗಿದ್ದಲ್ಲಿ, ಬಾಗಲಕೋಟೆ ಜಿಲ್ಲೆಗೆ ನೀಡಲು ಉದ್ದೇಶಿಸಿರುವ ಅಂತಹ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ? ತಾಲ್ಲೂಕುವಾರು ವಿವರಗಳನ್ನು ನೀಡುವುದು.

ಇ) ಈ ಲೈಸೆನ್ಸ್‌ಗಳನ್ನು ನೀಡುವಾಗ ಸಲ್ಲಿಸಲಾದ ಅರ್ಜಿಗಳ ಜೇಷ್ಠತಾ ಪಟ್ಟಿಯನ್ವಯ ಪರಿಗಣಿಸಲಾಗುವುದೇ ?

ಈ) ಇಲ್ಲದಿದ್ದರೆ, ಅರ್ಹತೆಯ ಅಳತೆಗೋಲುಗಳೇನು ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಪ್ರತಿ ತಾಲ್ಲೂಕಿನಲ್ಲಿ ಇರಬೇಕಾದ ಸಿಎಲ್-2 (ಚಿಲ್ಲರೆ ಮದ್ಯದಂಗಡಿಗಳು) ಮತ್ತು ಸಿಎಲ್-9 (ಬಾರ್‌ಗಳು) ಸನ್ನದುಗಳ ಸಂಖ್ಯೆಯನ್ನು ನಿಗಧಿಪಡಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಸದರಿ ಕೋಟಾ ನಿಗಧಿಪಡಿಸಿದ ನಂತರ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಆ) ಇ) ಈ) ಪ್ರಶ್ನೆ (ಅ) ಗೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಗದಗ್ ಬಿಜಾಪುರ ಗೇಜ್ ಪರಿವರ್ತನಾ ಕಾರ್ಯದ ಪ್ರಗತಿ

1644 (1880) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರಕಾರದ ರೈಲು ಖಾತೆ ಮತ್ತು ಕರ್ನಾಟಕ ಸರ್ಕಾರದ ಮಧ್ಯ ಮಾಡಿಕೊಂಡಿರುವ ಒಪ್ಪಂದದನ್ವಯ ಗದಗ-ಬಿಜಾಪೂರ ಗೇಜ್ ಪರಿವರ್ತನಾ ಕಾರ್ಯಕ್ಕಾಗಿ ಕೇಂದ್ರ ಸರಕಾರ ಶೇಕಡ 26 ರಷ್ಟು ಹಣ ರಾಜ್ಯ ಸರ್ಕಾರದಿಂದ ಶೇಕಡ 26 ರಷ್ಟು ಧನ ಅಲ್ಲದೆ ರಾಜ್ಯ ಸರ್ಕಾರದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಇಲಾಖೆಯಿಂದ ಇನ್ನುಳಿದ ಶೇಕಡ 48 ರಷ್ಟು ಧನವನ್ನು ಸಾರ್ವಜನಿಕ ವ್ಯವಸ್ಥೆಗಳಿಂದ ಸಂಗ್ರಹಿಸಿ ಕಾಮಗಾರಿಯನ್ನು ಮುಗಿಸಬೇಕೆನ್ನುವ